ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No:0821-2417107

**CHAMUNDESHWARI ELECTRICITY SUPPLY CORPORATION LIMITED**
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID: gmtech@cescmysore.org

Company Identity Number[CIN]:- **U40109KA2004SGC035177**

**ಸಂಖ್ಯೆ: ಚಾವಿಸನಿನಿ/ಪ್ರವ್ಯ(ತಾ)/ಉಪ್ರವ್ಯ(ಎಂಐಎಸ್)/ಸಪ್ರವ್ಯ-2/21-22/** Cys-1592 ದಿನಾಂಕ: 11 JAN 2022

ಮುಖ್ಯ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನಾ ವಲಯ,
ಚಾವಿಸನಿನಿ, ಮೈಸೂರು.

ಮಾನ್ಯರೇ,

**ವಿಷಯ:** ಹೂಟಗಳ್ಳಿ- ವಾಜಮಂಗಲ 220 ಕೆವಿ ಮಾರ್ಗದ ಮಾರ್ಗಮುಕ್ತತೆಗೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:** 1. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಮೈಸೂರು ರವರ ಪತ್ರ ಸಂಖ್ಯೆ: 5277-81 ದಿನಾಂಕ: 07.01.2022.
2. ನಿರ್ದೇಶಕರು(ತಾಂ)ರವರ ಅನುಮೋದಿತ ಟಿಪ್ಪಣಿ ದಿನಾಂಕ: 11.01.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೈಸೂರು ತಾಲ್ಲೂಕು ಸಿದ್ದಲಿಂಗಪುರ ಗ್ರಾಮದ ವ್ಯಾಪ್ತಿಯಲ್ಲಿ (CH.NO 134+00-134+100) ಹಾದು ಹೋಗಿರುವ 220ಕೆವಿಎ ಹೂಟಗಳ್ಳಿ- ವಾಜಮಂಗಲ ವಿದ್ಯುತ್ ಮಾರ್ಗದ Verticle clearance ನ್ನು ಹೆಚ್ಚು ಮಾಡುವ ಸಂಬಂಧ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಸ್ವಯಂ ಕಾಮಗಾರಿಯಡಿಯಲ್ಲಿ 220 ಕೆವಿ ಟವರ್ ಬದಲಾಯಿಸುವ ಕಾಮಗಾರಿಯನ್ನು ಕೈಗೊಳ್ಳಲು ಯೋಜನ ನಿರ್ದೇಶಕರು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರು ಉಲ್ಲೇಖ(1) ರಲ್ಲಿ ಮಾರ್ಗಮುಕ್ತತೆ ಕೋರಿರುವುದಾಗಿ ತಿಳಿಸಿ ದಿನಾಂಕ 16.01.2022, 17.01.2022 ಹಾಗೂ 18.01.2022 ರಂದು 06:00 ರಿಂದ 18.00 ಘಂಟೆಯವರೆಗೆ ಮಾರ್ಗಮುಕ್ತತೆ ಪಡೆಯಲು ಸಹಮತ ನೀಡುವಂತೆ ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಮೈಸೂರು ರವರು ಕೋರಿರುತ್ತಾರೆಂದು ತಿಳಿಸಿರುತ್ತೀರಿ.

ಮುಂದುವರೆದು, ಹೂಟಗಳ್ಳಿ - ವಾಜಮಂಗಲ 220 ಕೆವಿ ಮರ್ಗದ ಮಾರ್ಗಮುಕ್ತತೆಯನ್ನು ಪಡೆದ ಸಂದರ್ಭದಲ್ಲಿ 220 ಕೆವಿ ವಾಜಮಂಗಲ ಸ್ವೀಕರಣಾ ಕೇಂದ್ರ ಮತ್ತು 220ಕೆವಿ ಟಿ.ಕೆ.ಹಳ್ಳಿ ಸ್ವೀಕರಣ ಕೇಂದ್ರದ ಹೊರೆಯನ್ನು 220 ಕೆವಿ ಕಡಕೊಳ-ಬೇಗೂರು 1 & 2 ಮಾರ್ಗಕ್ಕೆ ವರ್ಗಾಯಿಸಿದಾಗ ಒಟ್ಟು ಹೊರೆ 293 MW ಆಗಲಿದ್ದು ಬಸ್ತೀಪುರ ಕಡಕೊಳ 1&2 ಮಾರ್ಗದ ಹೊರೆಯು 479 MW ಆಗಲಿರುವುದರಿಂದ ಸದರಿ ಮಾರ್ಗದ ಓವರ್‌ಲೋಡ್ ತಪ್ಪಿಸಲು ಹಾಲಿ ಐಡಲ್ ಇರುವ (ಕಡಕೊಳ ಸ್ವೀಕರಣಾ ಕೇಂದ್ರದಲ್ಲಿ ಓಪನ್ ಇಡಲಾಗಿರುತ್ತದೆ.) ಹೂಟಗಳ್ಳಿ-ಕಡಕೊಳ 220 ಕೆ.ವಿ ವಿದ್ಯುತ್ ಮಾರ್ಗದ ಮೂಲಕ ಸುಮಾರು 100 MW ನಷ್ಟು ಹೆಚ್ಚುವರಿ ಹೊರೆಯನ್ನು ಪಡೆಯಬಹುದಾಗಿರುತ್ತದೆ ಹಾಗೂ ಸದರಿ ಸಮಯದಲ್ಲಿ ಕನಿಯಂ ಬೆಟ್ಟ ವಿದ್ಯುತ್ ಮಾರ್ಗದ ಹೊರೆಯನ್ನು ಬೇರೆಡೆಗೆ ವರ್ಗಾಯಿಸಿಕೊಳ್ಳಲು ನಿರ್ದೇಶನ ನೀಡುವಂತೆ LDC ಬೆಂಗಳೂರು ರವರನ್ನು ಕೋರಲಾಗುವುದು ಹಾಗೂ ಮೇಲ್ಕಂಡ ಅಂಶಗಳನ್ನು ಪರಿಗಣಿಸಿದಾಗ 220ಕೆವಿ ಹೂಟಗಳ್ಳಿ- ವಾಜಮಂಗಲ ಮಾರ್ಗದ ಮಾರ್ಗಮುಕ್ತತೆ ಸಮಯದಲ್ಲಿ ಯಾವುದೇ ವಿದ್ಯುತ್ ಸ್ವೀಕರಣಾ/ವಿತರಣಾ ಕೇಂದ್ರಗಳಿಗೆ ವಿದ್ಯುತ್ ಅಡಚಣೆಯಾಗದಂತೆ ಕಾಮಗಾರಿಯನ್ನು ಕೈಗೊಳ್ಳಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆಂದು ಮತ್ತು ಮಾರ್ಗಮುಕ್ತತೆ ಸಮಯದಲ್ಲಿ ಯಾವುದೇ ವಿದ್ಯುತ್ ಸ್ವೀಕರಣಾ/ವಿತರಣಾ ಕೇಂದ್ರಗಳಿಗೆ ವಿದ್ಯುತ್ ಅಡಚಣೆಯಾಗದಿರುವುದರಿಂದ ತಾವು ಸಹ ಮಾರ್ಗಮುಕ್ತತೆಗೆ ಸಹಮತ ನೀಡಿರುತ್ತೀರಿ.

ಆದ್ದರಿಂದ ದಿನಾಂಕ 16.01.2022, 17.01.2022 ಹಾಗೂ 18.01.2022 ರಂದು 09:00 ರಿಂದ 17.00 ಘಂಟೆಯವರೆಗೆ 220ಕೆವಿ ಹೂಟಗಳ್ಳಿ- ವಾಜಮಂಗಲ ಮಾರ್ಗದ ಮಾರ್ಗಮುಕ್ತತೆ ಪಡೆಯಲು ನೀಡಲು ನಿರ್ದೇಶಕರು(ತಾಂತ್ರಿಕ) ರವರು ಉಲ್ಲೇಖ(2) ರಲ್ಲಿ ಅನುಮೋದಿಸಿರುತ್ತಾರೆ.

ಈ ನಿಟ್ಟಿನಲ್ಲಿ, ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ ರವರು ಗ್ರಾಹಕರುಗಳಿಗೆ ವಿದ್ಯುತ್ ವ್ಯತ್ಯಯದ ಮಾಹಿತಿಯನ್ನು ಮುಂಚಿತವಾಗಿ ಪತ್ರಿಕಾ ಪ್ರಕಟಣೆಯ ಮೂಲಕ ತಲುಪಿಸುವುದು, ಕೋವಿಡ್ ಆಸ್ಪತ್ರೆಗಳಿಗೆ ನಿರಂತರ ವಿದ್ಯುತ್ ಸರಬರಾಜು ಒದಗಿಸುವುದು ಹಾಗೂ ಕೇಂದ್ರ ಸ್ಥಾನದಲ್ಲೇ ಇದ್ದು ಕೆ.ಪಿ.ಟಿ.ಸಿ.ಎಲ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವಂತೆ ಸೂಚಿಸಲು ನಿರ್ದೇಶಿಸಲ್ಪಟ್ಟಿರುತ್ತೇನೆ.

**ಸೂಚನೆ: ಮೇಲೆ ತಿಳಿಸಿರುವ ಮಾರ್ಗಮುಕ್ತತೆಯ ದಿನಾಂಕಗಳಂದು ಯಾವುದೇ ಸರ್ಕಾರಿ ಕಾರ್ಯಕ್ರಮಗಳು/ಪರೀಕ್ಷೆಗಳಿದ್ದಲ್ಲಿ ಸದರಿ ದಿನಾಂಕದಂದು ಮಾರ್ಗಮುಕ್ತತೆಯು ರದ್ದಾಗುವುದೆಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.**

ತಮ್ಮ ವಿಶ್ವಾಸಿ,

11.1.2022

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಚಾವಿಸನಿನಿ, ಮೈಸೂರು

**ಪ್ರತಿಗಳು:**

1. ಮುಖ್ಯ ಇಂಜಿನಿಯರ್(ವಿ), ಪ್ರಸರಣಾ ವಲಯ, ಕವಿಪ್ರನಿನಿ, ಮೈಸೂರು ರವರ ಮಾಹಿತಿಗಾಗಿ.
2. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ, ಮೈಸೂರು/ಚಾ.ನಗರ-ಕೊಡಗು/ಮಂಡ್ಯ.
3. ಕಾರ್ಯನಿವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಚಾವಿಸನಿನಿ, ವಿ ವಿ ಮೊಹಲ್ಲಾ/ ಎನ್.ಆರ್ ಮೊಹಲ್ಲಾ / ನಂಜನಗೂಡು / ಹುಣಸೂರು/ ಕೆ.ಆರ್.ನಗರ / ಪಾಂಡವಪುರ/ ಮದ್ದೂರು.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಡಿಸಿಸಿ, ಚಾವಿಸನಿನಿ, ಮೈಸೂರು.
5. ಆಪ್ತ ಸಹಾಯಕರು, ವ್ಯವಸ್ಥಾಪಕ ನಿರ್ದೇಶಕರು/ ತಾಂತ್ರಿಕ ಸಹಾಯಕರು, ನಿರ್ದೇಶಕರು (ತಾಂತ್ರಿಕ), ಚಾವಿಸನಿನಿ ರವರ ಗಮನಕ್ಕೆ.

ಕಛೇರಿ ಪ್ರತಿ/ಮುಖ್ಯ ಕಡತ.